(*b*) Yes. The Committee have recommended.

(*c*) Government have decided to establish a Munsiff-Magistrate Court at Arsikere. Final orders will be issued on receipt of certain information from the High Court as regards jurisdiction and the date from which the proposed new court has to function.

Sri A. R. KARISIDDAPPA.—May I know when a decision would be taken by the Government ?

Sri B. D. JATTI.—Government has requested the High Court to inform them of the jurisdiction of the court and allied matters. As soon as a reply is received, Government will take a decision.

Sri A. R. KARISIDDAPPA.—Will a Munsiff-Magistrate's Court be established in the month of January 1960 ?

Sri B. D. JATTI.—I have already said that we are waiting for the reply of the High Court. Even if we get a reply tomorrow, the day after we will decide it.

ಶ್ರೀ ಎನ್. ಜಿ. ನರಸಿಂಹೇಗೌಡ.—ಮಲ್ಲಪ್ಪ ಕಮಿಟಿಯವರು ಹಾಸನ ಜಿಲ್ಲೆಯ ಚನ್ನರಾಯಪಟ್ಟಣದಲ್ಲಿ ಕೇಸುಗಳು ಜಾಸ್ತಿ ಇರುವುದರಿಂದ ಅಲ್ಲಿ ಒಂದು ಕೋರ್ಟನ್ನು ತೆರೆಯಬೇಕೆಂದು ಹೇಳಿರುವುದೂ ಸರಕಾರದ ಗಮನಕ್ಕೆ ಬಂದಿದೆಯೇ ?

Mr. SPEAKER.—It is outside the scope of the question.

ಶ್ರೀ ಎಂ. ರಾಮಪ್ಪ.—ಮಲ್ಲಪ್ಪ ಕಮಿಟಿಯವರ ವರದಿಯ ಆಧಾರದ ಮೇಲೆ ಈ ನಿರ್ಣಯ ಮಾಡಿಕೊಂಡಿದ್ದೀರೋ ಅಥವಾ ಇನ್ನಾವುದಾದರೂ ಇತರ ಬೇರೆ ಕಾರಣದಿಂದ ಇಲ್ಲಿ ಒಂದು ಕೋರ್ಟನ್ನು ಕೊಡುತ್ತೀರೋ ?

Sri B. D. JATTI.—The decision is based on the report of the Mallappa Committee.

ಶ್ರೀ ಎಂ. ರಾಮಪ್ಪ.—ಮಲ್ಲಪ್ಪ ಕಮಿಟಿಯವರು ತಿಪಟೂರಿಗೆ ಒಂದು ಮುನ್ಸೀಫ್ ಕೋರ್ಟನ್ನು ಪ್ರತ್ಯೇಕವಾಗಿ ತೆರೆಯಬೇಕೆಂದು ಶಿಫಾರ್ಸು ಮಾಡಿದ್ದಾರೆಯೇ ?

Mr. SPEAKER.—It is outside the scope of the question.

ಶ್ರೀ ಎಂ. ರಾಮಪ್ಪ.—ಹಾಗಾದರೆ ಮಲ್ಲಪ್ಪ ಕಮಿಟಿಯವರು ಯಾವ ಯಾವ ಕಡೆಗಳಲ್ಲಿ ಕೋರ್ಟನ್ನು ಕೊಡಬೇಕೆಂದು ಸರ್ಕಾರದವರಿಗೆ ಶಿಫಾರ್ಸು ಮಾಡಿದ್ದಾರೆ ?

Mr. SPEAKER.—It is outside the scope of the question.

ಶ್ರೀ ಎಂ. ರಾಮಪ್ಪ.—ಅರಸೀಕೆರೆಯಲ್ಲಿರತಕ್ಕ ಕೋರ್ಟ್ ಸೇರಿ ಎಷ್ಟು ಕೋರ್ಟುಗಳನ್ನು ಹಾಸನ ಜಿಲ್ಲೆಯಲ್ಲಿ ತೆರೆಯಬೇಕೆಂದು ಶಿಫಾರ್ಸು ಮಾಡಿದ್ದಾರೆ ?

Mr. SPEAKER.—That is outside the scope of the question.

Percentage of Chemicals contained in the Waters of Tanks in Hiriyur taluk.

*Q.—127. Sri K. KENCHAPPA (Hiriyur).—Will the Government be pleased to state :—

(*a*) the percentage of alkalinity and salinity in the waters of Ambalagere, Bhagavathikere, Dharmapura, Vani Vilas Sagar, Javanagondanahalli, Aimangola tanks and soils of wet lands irrigated by those tanks in Hiriyur Taluk;

(*b*) the percentage of reduction of yields of crops due to chemical reaction of the alkalinity and salinity in Hiriyur Taluk per annum and attempts of Government to prevent this loss ?

*A.—Sri N. RACHIAH (Minister for Agriculture, Excise and Social Welfare).-

(*a*) A number of soils from Ranganathapura and other areas in Hiriyur taluk have been examined and found to contain high amounts of total soluble salts ranging between 1,500 to 2,500 parts per million. The Soil PH ranges between 8.5 to 9.5.

(*b*) This information is not available.

ಶ್ರೀ ಕೆ. ಕೆಂಚಪ್ಪ.—ನನ್ನ (ಎ) ಪ್ರಶ್ನೆಗೆ ಬರಿಯ ರಂಗನಾಥಪುರದ ಕೆರೆಗೆ ಸಂಬಂಧಪಟ್ಟದ್ದನ್ನು ಮಾತ್ರ ಹೇಳಿ ಎಲ್ಲವನ್ನೂ ಪರೀಕ್ಷೆ ಮಾಡಿದ್ದೇವೆಂದು ಉತ್ತರ ಹೇಳಿದ್ದೀರಿ. ಇತರ ಕೆರೆಗಳಿಂದ ನೀರಾವರಿಯಾಗುವ ತರೀ ಜಮೀನಿನ ವಿಷಯವನ್ನು ಹೇಳಲಿಲ್ಲ. ಕಾರಣವೇನು ?

†ಶ್ರೀ ಎನ್. ರಾಚಯ್ಯ.—ಇತರ ಕೆರೆಗಳ ವಿಚಾರಗಳಲ್ಲಿಯೂ ಸಂಬಂಧಪಟ್ಟ ವ್ಯವಸಾಯ ಕಮಿಷನ್ನಿನವರು ಎಲ್ಲಾ ಸ್ಥಳಗಳಿಗೆ ಭೇಟಿ ಕೊಟ್ಟು, ಅದರಲ್ಲೂ ಮಾನ್ಯ ಸದಸ್ಯರ ಜಮೀನಿಗೂ ಭೇಟಿ ಕೊಟ್ಟು ಸರ್ಕಾರಕ್ಕೆ ಒಂದು ವರದಿಯನ್ನೂ ಸಹ ಕಳಿಸಿಕೊಟ್ಟಿದ್ದಾರೆ.

ಶ್ರೀ ಕೆ. ಕೆಂಚಪ್ಪ.—ನನ್ನ ಪ್ರಶ್ನೆ ಏನೆಂದರೆ, ಉತ್ತರದಲ್ಲಿ ಪ್ರತಿಯೊಂದು ಕೆರೆಯ ವಿವರ ಸರಿಯಾಗಿ ಹೇಳಿಲ್ಲ. ಅದಕ್ಕೇನು ಕಾರಣ ?

ಶ್ರೀ ಎನ್. ರಾಚಯ್ಯ.—ಅವರು ಎಲ್ಲಾ ಪ್ರದೇಶಗಳಲ್ಲೂ ಪ್ರವಾಸ ಮಾಡಿ ನಮಗೆ ವರದಿಯನ್ನು ಕೊಟ್ಟಿದ್ದಾರೆ.

ಶ್ರೀ ಕೆ. ಕೆಂಚಪ್ಪ.—ಅದರ ಫಲಿತಾಂಶವೇನು ?

ಶ್ರೀ ಎನ್. ರಾಚಯ್ಯ.—ಉತ್ತರ ಅಚ್ಚಾಗಿದೆ.

ಶ್ರೀ ಕೆ. ಕೆಂಚಪ್ಪ.—ಉತ್ತರದಲ್ಲಿ ಕೇವಲ ರಂಗನಾಥಪುರದ ಕೆರೆಯ ವಿಷಯ ಮಾತ್ರವಿದೆ. ಬೇರೆ ಕೆರೆಗಳ ವಿಷಯ ಏತಕ್ಕೋಸ್ಕರ ಉತ್ತರದಲ್ಲಿ ಸ್ಪಷ್ಟಪಡಿಸಿಲ್ಲ? ಹಾಗಿದ್ದರೆ ತಮ್ಮ ಉತ್ತರದ ಪ್ರಕಾರ ಎಲ್ಲಾ ಗ್ರಾಮಗಳ ಪ್ರದೇಶದಲ್ಲೂ ಒಂದೇ ತರಹ ಭೂಮಿ ಇದೆಯೇ?

ಶ್ರೀ ಎನ್. ರಾಚಯ್ಯ.—ಆ ವರದಿಯ ಪ್ರಕಾರ ಉತ್ತರ ಕೊಟ್ಟಿದೆ. ಮಾನ್ಯ ಸದಸ್ಯರಿಗೇನಾದರೂ ಅನುಮಾನ ಬಂದರೆ, ಅದನ್ನು ನನಗೆ ಕಳುಹಿಸಿದರೆ ಸಾಕಾಷ್ಟು ಮಾಹಿತಿಯನ್ನು ಸದಸ್ಯರಿಗೆ ಒದಗಿಸಿ ಕೊಡುತ್ತೇನೆ.

ಶ್ರೀ ಕೆ. ಕೆಂಚಪ್ಪ.—ಮತ್ತೆ ಒದಗಿಸಿಕೊಡುತ್ತೇನೆಂದರೆ ಇನ್ನು ಮೂರು ವರ್ಷಗಳಾಗುತ್ತವೆ. ಈಗಾಗಲೇ ಹತ್ತು ವರ್ಷಗಳಾಗಿವೆ. ನನ್ನ (ಬಿ) ಪ್ರಶ್ನೆಗೆ "ಈ ವಿವರಗಳು ದೊರೆಯುವಂತಿಲ್ಲ" ಎಂದು ಈಗ ಉತ್ತರದಲ್ಲಿ ಹೇಳಿದ್ದೀರಿ. ಸಂಬಂಧಪಟ್ಟ ಅಗ್ರಿಕಲ್ಚರಲ್ ಆಫೀಸರ್ 1958ನೆಯ ಜುಲೈ 22ನೆಯ ತಾರೀಖಿನಲ್ಲಿ ಎಲ್ಲವನ್ನೂ ಇನ್‌ಸ್ಪೆಕ್ಷನ್ ಮಾಡಿ ಪರೀಕ್ಷೆ ಮಾಡಿದ್ದರೂ, ಈಗ ವರ್ಷದ ಕೊನೆಯಾಗುತ್ತಾ ಬಂದರೂ ಈ ರೀತಿಯಾಗಿ ಉತ್ತರ ಕೊಟ್ಟಿದ್ದೀರಿ. ಅದಕ್ಕೆ ಕಾರಣವೇನು?

Sri N. RACHIAH.—This disability could be prevented only when we put up contour bunds. In old Mysore there is no Act governing this subject and therefore we intend introducing a Bill.

ಶ್ರೀ ಕೆ. ಕೆಂಚಪ್ಪ.—1951ನೆಯ ಇಸವಿಯಿಂದ 1957ನೆಯ ಇಸವಿಯವರೆಗೆ ನೀವು ಡ್ರೈನೇಜ್ ಕೆಲಸವನ್ನು ಆ ಸ್ಥಳಗಳಲ್ಲಿ ಮಾಡಿಸಿದ್ದೀರೋ ಇಲ್ಲವೋ?

Sri N. RACHIAH.—That information is not available.

ಶ್ರೀ ಕೆ. ಕೆಂಚಪ್ಪ.—ಸರ್ಕಾರದವರು ಈ ಬಗ್ಗೆ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದಾರೆ?

ಶ್ರೀ ಎನ್. ರಾಚಯ್ಯ.—ತಮಗೆ ಇನ್ನು ಆರು ತಿಂಗಳ ಅವಧಿಯಲ್ಲಿ ಈ ಬಗ್ಗೆ ಎಲ್ಲ ಮಾಹಿತಿಯನ್ನೂ ಒದಗಿಸುತ್ತೇನೆಂದು ಭರವಸೆ ಕೊಡುತ್ತೇನೆ.

ಶ್ರೀ ಕೆ. ಕೆಂಚಪ್ಪ.—ಈ ತರಹ ಭರವಸೆಯನು ಎಷ್ಟು ವರ್ಷಗಳಿಂದ ಕೊಡುತ್ತಿದ್ದೀರಿ?

ಶ್ರೀ ಎನ್. ರಾಚಯ್ಯ.—ಭರವಸೆಯು ಮೇಲೆಯೇ ಇವೆಲ್ಲವನ್ನೂ ಮಾಡುತ್ತಿರುವುದು.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಹಿರಿಯೂರ್ ತಾಲ್ಲೂಕಿನಲ್ಲಿ ಈ ರೀತಿಯಾದ ಜಪ್ತಿನು ಜನರಿಗೆ ಎಷ್ಟಿದೆ, ಅದರ ಪೈಕಿ ನಿಮ್ಮ ಇಲಾಖೆಯವರು ಭೂ ಪರೀಕ್ಷೆ ಮಾಡಿದ ಜಪ್ತಿನು ಎಷ್ಟು?

ಶ್ರೀ ಎಚ್. ರಾಚಯ್ಯ.—ಭೂಪರೀಕ್ಷೆ ಮಾಡಿದ ಮೇಲೆಯೇ ಈ ಫಲತಾಂಶವನ್ನು ಕೊಟ್ಟಿದ್ದಾರೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಈ ವಿಚಾರದಲ್ಲಿ ಮುಂದೆ ಯಾವ ರೀತಿ ಪ್ರೋಗ್ರೆಸ್ ಮಾಡಬೇಕೆಂದು ಯೋಚಿಸುತ್ತೀರಾ?

ಶ್ರೀ ಎನ್. ರಾಚಯ್ಯ.—ಪ್ರತಿಯೊಂದು ವಿಚಾರವನ್ನೂ ಸರ್ಕಾರದವರು ಕೂಲಂಕಷವಾಗಿ ಯೋಚಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಾರೆ.

Appeals pending against the Orders of Revenue Assistant Commissioner; Nanjangud.

*Q.—146. Sri G. M. CHINNA SWAMY (Biligere).—

Will the Government be pleased to state:—

(*a*) whether it has come to their notice that there are several appeals pending against the orders of the Revenue Assistant Commissioner Nanjangud, by the village officers;

(*b*) if so, how many appeals are pending at present;

(*c*) how many appeals have been filed during the past one year;

(*d*) in how many appeals have the original orders been reversed, ratified or modified;

(*e*) whether it has come to their notice that several representations have been made on behalf of the village officers in respect of unnecessary punishments to which they have been subjected;

(*f*) the action taken by them in the matter?

*A.—Sri KADIDAL MANJAPPA (Minister for Revenue).—

(*a*) Yes.

(*b*) 8.

(*c*) 18 in the year 1958-59.

(*d*) 2 (Modified)
3 (Remanded)
4 (Reversed)

(*e*) No.

(*f*) Does not arise.

ಶ್ರೀ ಜಿ. ಎಂ. ಚಿನ್ನಸ್ವಾಮಿ.—ನನ್ನ ಪ್ರಶ್ನೆಯ (ಸಿ) ಕ್ಲಾಜಿಗೆ 18 ಎಂದು ಉತ್ತರ ಹೇಳಿದ್ದೀರಿ. ಯಾವ ಯಾವ ಕಾರಣಗಳಿಂದ ಆ ಅಪೀಲ್ಸ್ ಫೈರ್ ಆಗಿವೆ? ಅವನ್ನು ಡಿಸ್‌ಮಿಸ್ ಮಾಡಿದ್ದಾರೆಯೇ?

†ಶ್ರೀ ಕಡಿದಾಳ್ ಮಂಜಪ್ಪ.—ಅದು ಒಂದು ದೊಡ್ಡ ಪಟ್ಟಿ ಇದೆ. ನಾನಾ ಕಾರಣಗಳಿಂದ ಆ ರೀತಿ ಮಾಡಿದ್ದಾರೆ.

ಶ್ರೀ ಜಿ. ಎಂ. ಚಿನ್ನಸ್ವಾಮಿ.—ನಾನಾ ಕಾರಣಗಳೆಂದರೆ ಯಾವುವು?

Sri KADIDAL MANJAPPA.—Some one placed under suspension, pending enquiry for allegations of misappropriation, enquiry for misappropriation; and some one suspended for failing to report illicit cutting of trees—ಹೀಗೆ ಇತ್ಯಾದಿ ಕಾರಣಗಳಿವೆ.